**ಕರ್ನಾಟಕ ಲೋಕಾಯುಕ್ತ**

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/1290/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ,ಬೆಂಗಳೂರು.
ದಿನಾಂಕ: ~~28/12/2021~~ 6/1/22

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ**

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ಸಿ. ರಘು, ತಂದೆ ಚಿಕ್ಕಯ್ಯ, ಗ್ರಾಮ ಲೆಕ್ಕಾಧಿಕಾರಿ, ಭೂಮಿ ಕೇಂದ್ರ ತಾಲ್ಲೂಕು ಕಛೇರಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೇಂದ್ರ ವಲಯ, ಬೆಂಗಳೂರು ಇವರು ತುಮಕೂರು ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ.) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ಸಿ. ರಘು, ತಂದೆ ಚಿಕ್ಕಯ್ಯ, ಗ್ರಾಮ ಲೆಕ್ಕಾಧಿಕಾರಿ, ಭೂಮಿ ಕೇಂದ್ರ ತಾಲ್ಲೂಕು ಕಛೇರಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಶ್ರೀ ನರಸಿಂಹಯ್ಯ ತಂದೆ ಲೇಟ್ ಚಿಕ್ಕ ಮಾಸ್ತಿಗೌಡ, ವಾಸ: ಬಸವನಮತ್ತಿಕೆರೆ ಗ್ರಾಮ, ಯಡಿಯೂರು ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ. (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **ದೂರಿನ ಸಂಕ್ಷಿಪ್ತ ವಿವರಣೆ:-** ದೂರುದಾರರು ಬಸವನಮತ್ತಿಕೆರೆ ಗ್ರಾಮದ ಸರ್ವೆ ನಂ. 30/2 ರಲ್ಲಿ ಪೌತಿ ಖಾತೆ ಬದಲಾವಣೆಗಾಗಿ ಅರ್ಜಿ ಕೊಟ್ಟಿದ್ದು, ಕುಣಿಗಲ್ ತಾಲ್ಲೂಕು ಕಛೇರಿಯಲ್ಲಿರುವ ಭೂಮಿ ಕೇಂದ್ರದಲ್ಲಿ ವಿಲೇಜ್ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿರುವ ಎದುರುದಾರರು ಮುಂಗಡವಾಗಿ 6,000/- ರೂಪಾಯಿ ಲಂಚ ಪಡೆದುಕೊಂಡು ನಂತರ ಇನ್ನೂ ರೂ. 3,000/- ಗಳ ಲಂಚದ ಹಣಕ್ಕೆ ದೂರುದಾರರಿಗೆ ಬೇಡಿಕೆ ಇಟ್ಟಿದ್ದು ಇರುತ್ತದೆ. ಸದರಿ ಲಂಚದ ಹಣವನ್ನು ಎದುರುದಾರರಿಗೆ ನೀಡಲು ಇಷ್ಟವಿಲ್ಲದ ಕಾರಣ ದೂರುದಾರರು

ತುಮಕೂರು ಜಿಲ್ಲೆ ಎ.ಸಿ.ಬಿ. ಪೋಲೀಸ್ ಠಾಣೆಗೆ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದೂರನ್ನು ದಿನಾಂಕ 06/05/2017 ರಂದು ನೀಡಿರುತ್ತಾರೆ. ಈ ಬಗ್ಗೆ ತುಮಕೂರು ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 05/2017 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 06/05/2017 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಲ್ಯಾಪ್‌ಟಾಪ್‌ಗೆ ಹಾಕಿ ಡಿ.ವಿ.ಡಿ.ಗೆ ವರ್ಗಾಯಿಸಿಕೊಂಡು ದೂರನ್ನು ಸಲ್ಲಿಸಿದ್ದು ಸದರಿ ಡಿ.ವಿ.ಡಿ.ಯನ್ನು ಆನ್ ಮಾಡಿ ಪಂಚರಿಗೆ ಕೇಳಿಸಿ, ಲಿಪೀಕರಣ ಮಾಡಿ ವಶಪಡಿಸಿಕೊಂಡಿರುತ್ತಾರೆ. ನಂತರ ಲಂಚದ ಹಣ ರೂ. 3,000/- ದೂರುದಾರರು ಹಾಜರುಪಡಿಸಿದ್ದು ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಹ ಪಂಚ ಶ್ರೀ ನರಸಿಂಹಯ್ಯ ಬಿನ್ ಲೇಟ್ ಚಿಕ್ಕನರಸಯ್ಯ ಇವರು ಲಂಚದ ಹಣಕ್ಕೆ ಪಿನಾಪ್ತಲಿನ್ ಪೌಡರ್ ಲೇಪಿಸಿ, ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಶ್ರೀ ಜಿ. ದೇವರಾಜ್ ಬಿನ್ ಲೇಟ್ ಗೋವಿಂದಪ್ಪ, ಎಫ್.ಡಿ.ಎ. ಸಾರಿಗೆ ಪ್ರಾದೇಶಿಕ ಆಯುಕ್ತರ ಕಛೇರಿ, ಸಾರಿಗೆ ಇಲಾಖೆ, ತುಮಕೂರು ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ತಿಳಿಸಬೇಕೆಂದು ಹೇಳಿರುತ್ತಾರೆ. ನಂತರ ತನಿಖಾಧಿಕಾರಿಗಳು ವಾಯ್ಸ್ ರೆಕಾರ್ಡರ್‌ನ್ನು ನೀಡಿ, ಧ್ವನಿ ಸಂಭಾಷಣೆಯನ್ನು ರೆಕಾರ್ಡ್ ಮಾಡಲು ದೂರುದಾರರಿಗೆ ತಿಳಿಸಿರುತ್ತಾರೆ. ದೂರುದಾರರಿಗೆ

ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ಕೈಗಳಿಂದ ತಲೆಯನ್ನು ಒರೆಸಿಕೊಳ್ಳುವುದರ ಮೂಲಕ ಸಂಜ್ಞೆ ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ತನಿಖಾಧಿಕಾರಿಗಳು ಠಾಣೆಯಿಂದ ದೂರುದಾರರು, ಪಂಚ ಸಾಕ್ಷಿಗಳು ಹಾಗೂ ಸಿಬ್ಬಂಧಿಯವರೊಂದಿಗೆ ದಿನಾಂಕ 06/05/2017 ರಂದು ಸಂಜೆ 5-15 ಕ್ಕೆ ಕುಣಿಗಲ್ ತಾಲ್ಲೂಕು ಕಛೇರಿಯ ಭೂಮಿ ಕೇಂದ್ರದ ಕಂಪ್ಯೂಟರ್ ವಿಭಾಗದ ಕೊಠಡಿಗೆ ಹೊರಟಿರುತ್ತಾರೆ. ದೂರುದಾರರು ಹಾಗೂ ನೆರಳು ಸಾಕ್ಷಿ ಕುಣಿಗಲ್ ತಾಲ್ಲೂಕು ಕಛೇರಿಯ ಭೂಮಿ ಕೇಂದ್ರದ ಕಂಪ್ಯೂಟರ್ ವಿಭಾಗದ ಕೊಠಡಿಗೆ ಹೋಗಿ, ದೂರುದಾರರು "ನನ್ನ ಕೆಲಸ ಆಯ್ತಾ ಸ್ವಾಮಿ" ಅಂತ ಎದುರುದಾರರಿಗೆ ಕೇಳಿದಾಗ, ಎದುರುದಾರರು "ತಂದಿದ್ದೀಯಾ" ಎಂದು ಕೇಳಿದರು. ದೂರುದಾರರು ಜೇಬು ಮುಟ್ಟಿ ನೋಡಿದಾಗ "ಹೊರಗೆ ಬರುತ್ತೇನೆ" ಎಂದು ಎದುರುದಾರರು ಸನ್ನೆ ಮಾಡಿರುತ್ತಾರೆ. ನಂತರ ಎದುರುದಾರರು ಎರಡು ಬಾರಿ ಅವರ ಛೇಂಬರಿನಿಂದ ಒಳಗೆ, ಹೊರಗೆ ಓಡಾಡಿ, ಲಂಚದ ಹಣ ಪಡೆದುಕೊಳ್ಳಲು ಯಾರೂ ಇಲ್ಲದೇ ಇರುವುದನ್ನು ಗಮನಿಸಿ ದೂರುದಾರರನ್ನು ಕಂಪ್ಯೂಟರ್ ವಿಭಾಗದ ಕೊಠಡಿಯಿಂದ ಹೊರಗೆ ಕರೆದುಕೊಂಡು ಹೋಗಿ, ಪ್ಯಾಸೇಜಿನಲ್ಲಿ ಫಿನಾಫ್ತಲಿನ್ ಪೌಡರ್ ಲೇಪಿತ ರೂ. 3,000/- ಹಣವನ್ನು ಪಡೆದುಕೊಂಡು ಎರಡೂ ಕೈಗಳಿಂದ ಎಣಿಸಿ ಅವರು ಧರಿಸಿದ್ದ ಪ್ಯಾಂಟಿನ ಬಲ ಭಾಗದ ಜೇಬಿಗೆ ಹಾಕಿಕೊಂಡರು. ದೂರುದಾರರು ತನ್ನ ತಲೆಯನ್ನು ಹಿಂದಕ್ಕೆ ಒರೆಸಿಕೊಳ್ಳುವದರ ಮೂಲಕ ನಿಗದಿತ ಸಿಗ್ನಲ್ ನೀಡಿದರು. ಕಛೇರಿಯ ಹೊರಗೆ ತನಿಖಾಧಿಕಾರಿಗಳು ಹಾಗೂ ಸಿಬ್ಬಂದಿ ಬರುವುದನ್ನು ನೋಡಿ ಎಡಗೈಯಿಂದ ಲಂಚದ ಹಣವನ್ನು ತೆಗೆದು ಕಟ್ಟಣದ ಗ್ರಿಲ್ ಇರುವ ಪ್ಯಾಸೇಜಿಗೆ ಹಣವನ್ನು ಬಿಸಾಕಿರುತ್ತಾರೆ. ದೂರುದಾರರು, ನೆರಳು ಸಾಕ್ಷಿ ಹಾಗೂ ತನಿಖಾಧಿಕಾರಿಗಳು ಇದನ್ನು ಗಮನಿಸಿ ಎದುರುದಾರರಿಗೆ ತಮ್ಮ, ಪಂಚ ಸಾಕ್ಷಿಗಳ ಪರಿಚಯ ನೀಡಿ ತನಿಖೆಗೆ ಸಹಕರಿಸಬೇಕೆಂದು ಕೋರಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ಎದುರುದಾರರ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಎದುರುದಾರರಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ ಆತನು ಧರಿಸಿದ್ದ ಪ್ಯಾಂಟನ್ನು ಬಿಚ್ಚಿಸಿ ಸದರಿ ಪ್ಯಾಂಟಿನ ಬಲಭಾಗದ ಜೇಬನ್ನು ಹೊರಭಾಗಕ್ಕೆ ತೆಗೆದು ಅದನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ

ಬದಲಾವಣೆಯಾಗಿರುತ್ತದೆ. ಸದರಿ ಪ್ಯಾಂಟನ್ನೂ ಸಹ ತನಿಖಾಧಿಕಾರಿಯವರು ಪಂಚರ ಸಮಕ್ಷಮ ಅಮಾನತ್ ಪಡಿಸಿಕೊಂಡಿರುತ್ತಾರೆ. ನಂತರ ದೂರುದಾರರು ಕಛೇರಿಯ ಬಲಭಾಗದ ಕಬ್ಬಿಣ ಗ್ರಿಲ್ ಒಳಗೆ ಚುನಾವಣಾ ಮತ ಪೆಟ್ಟಿಗೆಗಳನ್ನು ತುಂಬಿದ್ದು ಸ್ವಲ್ಪ ಕಸ ಸಹ ಬಿದ್ದಿರುತ್ತದೆ. ಅಲ್ಲಿ ಎದುರುದಾರರು ಬಿಸಾಕಿದ ಲಂಚದ ಹಣವನ್ನು ಪಂಚರ ಸಮಕ್ಷಮ ಪಡೆದುಕೊಂಡು ಅದನ್ನು ಪರಿಶೀಲಿಸಿದಾಗ ಅದು ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಬರೆದ ನೋಟುಗಳ ಸಂಖ್ಯೆ, ಮೌಲ್ಯ ಹಾಗೂ ನಂಬರ್ ತಾಳೆಯಾಗುತ್ತಿದ್ದು ಸದರಿ ರೂ. 3,000/- ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ವಶಪಡಿಸಿಕೊಂಡಿರುತ್ತಾರೆ. ಎದುರುದಾರರಿಂದ ಸಮಜಾಯಿಷಿ ಕೇಳಲಾಗಿ "ಬಸವಮುತ್ತಿಕೆರೆ ಗ್ರಾಮದ ಸರ್ವೆ ನಂ. 30/2 ರಲ್ಲಿ ದಿ: 31/02/2017 ರಂದು ಖಾತೆ ಪಹಣಿಯಾಗಿರುತ್ತದೆ. ಆದರೆ ಚಿಕ್ಕನರಸಿಂಹಯ್ಯನವರು ಖಾತೆಯಾಗಿರುವುದು ತಿಳಿಯದೆ ಖಾತೆ ಮಾಡಿಕೊಡಲು ಹಣ ನೀಡಲು ಬಂದಿದ್ದು ನನ್ನ ಕೈಯಲ್ಲಿ ಹಣವನ್ನು ಬಲವಂತವಾಗಿ ಇಟ್ಟು ಖಾತೆ ಮಾಡಿಕೊಡಬೇಕೆಂದು ಕೋರಿದ್ದು ಸದರಿ ಹಣವನ್ನು ಅವರ ಕೈಗೆ ವಾಪಸ್ ಮಾಡಿರುತ್ತೇನೆ. ಹಾಗೂ ಈಗಾಗಲೇ ಖಾತೆಯಾಗಿರುವುದರಿಂದ ಪಹಣಿ ತೆಗೆದುಕೊಳ್ಳಿ ಎಂದು ಹೇಳಿರುತ್ತೇನೆ" ಎಂದು ಸಮಜಾಯಿಷಿ ನೀಡಿರುತ್ತಾರೆ. ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ತನಿಖಾಧಿಕಾರಿಗಳು ನೆರಳು ಸಾಕ್ಷಿ ಶ್ರೀ ಜಿ. ದೇವರಾಜ್ ಬಿನ್ ಲೇಟ್ ಗೋವಿಂದಪ್ಪ, ಸಹ ಪಂಚ ಅವರಿಂದ ಅಲ್ಲಿಯ ನಡುವಳಿಕೆಗಳನ್ನು ತಿಳಿದು ಸವಿಸ್ತಾರ ಜಪ್ತಿ ಪಂಚನಾಮೆ ನಿರ್ವಹಿಸಿ, ದೂರುದಾರರ ಹಾಗೂ ಪಂಚರ ಸಮಕ್ಷಮ ಸದರಿ ಹಣ, ಮುದ್ದೆ ಮಾಲುಗಳನ್ನು ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ತನಿಖಾಧಿಕಾರಿಗಳು ವಶಪಡಿಸಿ ಕೊಂಡಿರುತ್ತಾರೆ. ಎದುರುದಾರರ ಮೇಲಾಧಿಕಾರಿಯವರಾದ ಕೆ. ಸೋಮಶೇಖರ್ ಬಿನ್ ಲೇಟ್ ಸಿ. ಕೆಂಪಯ್ಯ, ಹಕ್ಕು ದಾಖಲೆಯ ಶಿರಸ್ತೇದಾರ್, ತಾಲ್ಲೂಕು ಕಛೇರಿ, ಕುಣಿಗಲ್ ಇವರು ದೂರುದಾರರ ಮತ್ತು ಎದುರುದಾರರ ಮಧ್ಯೆ ನಡೆದ ಲಂಚದ ಬೇಡಿಕೆ ಬಗ್ಗೆ ಸಂಭಾಷಣೆಯ ಧ್ವನಿ ಮುದ್ರಣವನ್ನು ವಾಯ್ಸ್ ರೆಕಾರ್ಡರ್‌ನಿಂದ ಡಿ.ವಿ.ಡಿ.ಯನ್ನು ಲ್ಯಾಪ್ ಟ್ಯಾಪ್‌ನಲ್ಲಿ ಹಾಕಿ ಆನ್ ಮಾಡಿ ಕೇಳಿಸಲಾಗಿ ಅದರಲ್ಲಿ ಮುದ್ರಿತವಾಗಿರುವ ಸಂಭಾಷಣೆಯಲ್ಲಿನ ಒಂದು ಧ್ವನಿ ಎದುರುದಾರರವರದ್ದೇ ಎಂದು ಗುರ್ತಿಸಿರುತ್ತಾರೆ. ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

5) ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 20/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ತಮ್ಮ ಸಮಜಾಯಿಷಿಯಲ್ಲಿ "ನಾನು ದೂರುದಾರರಿಂದ ಯಾವುದೇ ಹಣ ಪಡೆದಿರುವುದಿಲ್ಲ ಮತ್ತು

ಬೇಡಿಕೆಯನ್ನು ಸಹ ಇಟ್ಟಿರುವುದಿಲ್ಲ. ಲಂಚದ ಹಣವನ್ನು ಎರಡೂ ಕೈಗಳಿಂದ ಎಣಿಸಿ ನಾನು ಧರಿಸಿದ್ದ ಪ್ಯಾಂಟಿನ ಬಲ ಜೇಬಿನಲ್ಲಿ ಇಟ್ಟುಕೊಂಡ ಬಗ್ಗೆ ಮೊಬೈಲ್‌ನಿಂದ ವಿಡಿಯೋ ಮಾಡಿದ್ದೇನೆ ಎಂದು ನೆರಳು ಸಾಕ್ಷಿರವರು ನನ್ನ ಮೇಲೆ ಸುಳ್ಳು ಹೇಳಿಕೆಯನ್ನು ನೀಡಿರುತ್ತಾರೆ ಮತ್ತು ನಾನು ಭೂಮಿ ಕೇಂದ್ರದ ಹೊರಗೆ ಬಂದು ಗ್ರಿಲ್ ನಲ್ಲಿ ಹಣವನ್ನು ಬಿಸಾಡಿದೆ, ಅದನ್ನೂ ಸಹ ವಿಡಿಯೋ ಮಾಡಿರುತ್ತಾರೆ ಎನ್ನುವುದು ಸುಳ್ಳು" ಎಂದು ಲಿಖಿತ ವಿವರಣೆ ನೀಡಿರುತ್ತಾರೆ ಹಾಗೂ ಖಾತೆ ಬದಲಾವಣೆ ಪ್ರತಿಯ ಬಗ್ಗೆ ಕೂಡ ವಿವರಣೆ ನೀಡಿರುತ್ತಾರೆ. ಈ ಪ್ರಕರಣವು 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತುಮಕೂರು ವಿಚಾರಣೆಯಾಗಿ ಬಿಡುಗಡೆಯಾಗಿರುವ ತೀರ್ಪಿನ ಪ್ರತಿಯನ್ನು ಲಗತ್ತಿಸಿರುತ್ತಾರೆ. "ನನ್ನ ಮೇಲೆ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತವೆ. ಈ ಎಲ್ಲಾ ಆರೋಪಗಳು ಕಂದಾಯ ನಿರೀಕ್ಷಕರಾದ ರಾಜಕುಮಾರ್‌ರವರ ಮೇಲೆ ಮಾನ್ಯ ಲೋಕಾಯುಕ್ತದಲ್ಲಿ ಪ್ರಕರಣ ಮತ್ತು ಹಲವು ಇಲಾಖಾ ವಿಚಾರಣೆಗಳು ಇರುತ್ತವೆ. ಕಂದಾಯ ನಿರೀಕ್ಷಕರಾದ ರಾಜಕುಮಾರ್‌ರವರಿಗೆ ಹಿಂಬಡ್ತಿಯನ್ನೂ ಸಹ ನೀಡಿರುತ್ತಾರ" ಎಂದು ದಾಖಲೆಗಳ ಪುಟ ಸಂಖ್ಯೆ 16 ರಿಂದ 25ನ್ನು ಲಗತ್ತಿಸಿರುತ್ತಾರೆ. ಆದ್ದರಿಂದ "ತಮ್ಮ ಮೇಲಿನ ಇಲಾಖಾ ವಿಚಾರಣೆಯನ್ನು ಕೈ ಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು" ಕೋರಿಕೊಂಡಿರುತ್ತಾರೆ. ಎದುರುದಾರರು ಜಪ್ತಿ ಮಹಜರ್ ಕಾಲದಲ್ಲಿ ನೀಡಿದ ಸಮಜಾಯಿಷಿಗೂ ಹಾಗೂ ಪರಿವೀಕ್ಷಣಾ ಟಿಪ್ಪಣಿಗೆ ನೀಡಿದ ಸಮಜಾಯಿಷಿಗೂ ಪೂರಕವಾಗದೆ ಪರಿವೀಕ್ಷಣಾ ಟಿಪ್ಪಣಿಗೆ ನೀಡಿದ ಸಮಜಾಯಿಷಿಯಲ್ಲಿ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ನಡೆಯುವ ಕ್ರಿಮಿನಲ್ ಪ್ರಕರಣವು ಮತ್ತು ಇಲಾಖಾ ವಿಚಾರಣೆಯಲ್ಲಿ ನಡೆಯುವ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ರನ್ವಯ ಎದುರುದಾರರ ದುರ್ನಡತೆಯ ಪ್ರಕರಣವಾಗಿದ್ದು ಈ ಎರಡೂ ವಿಚಾರಣೆಗಳು ಪ್ರತ್ಯೇಕವಾಗಿರುತ್ತವೆ. ಆದ್ದರಿಂದ ಕ್ರಿಮಿನಲ್ ಪ್ರಕರಣದಲ್ಲಿ ಬಿಡುಗಡೆಯಾದ ವಿಷಯಕ್ಕೂ ಹಾಗೂ ಈ ಪ್ರಕರಣದ ವಿಷಯಕ್ಕೂ ವ್ಯತ್ಯಾಸವಿರುವುದರಿಂದ ಕ್ರಿಮಿನಲ್ ಪ್ರಕರಣದ ತೀರ್ಪು ಈ ಪ್ರಕರಣಕ್ಕೆ ಅನ್ವಯಿಸಲಾಗದು.

6) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ

ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

7) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i ರಿಂದ iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

8) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

6-1-22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.